# 2 ನೇ ಅಪರ ಜಿಲ್ಲಾ ಮತ್ತು ಸತ್ರ, ನ್ಯಾಯಾಧೀಶರವರ ನ್ಯಾಯಾಲಯ ಮೈಸೂರು

| ಎಸ್ ಸಿ : | 268/2021 |
|---|---|

| | | |
|---|---|---|
| ಸಾಕ್ಷಿದಾರರ ಹೆಸರು | ಶ್ರೀ ಮಹದೇವಸ್ವಾಮಿ @ ದ್ವಾರಕಿ | |
| ತಂದೆ ಹೆಸರು | ಪುಟ್ಟಮಾದಯ್ಯ | ಸಾಕ್ಷಿಗೆ **ದಿಃ 13.09.2023** ರಂದು ಪ್ರಮಾಣ ವಚನ ಭೋಧಿಸಲಾಯಿತು. |
| ವಯಸ್ಸು | 46 ವರ್ಷ | |
| ಉದ್ಯೋಗ | ವ್ಯವಸಾಯ | ಪಿ.ಡಬ್ಲ್ಯೂ-04 |
| ವಾಸ ಸ್ಥಳ | ಮೂಗೂರು, ಟಿ.ನರಸೀಪುರ ತಾಲ್ಲೂಕು. | ಸಿ.ಡಬ್ಲ್ಯೂ-02 |

## ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ಮೃತ ಭಾಗ್ಯಲಕ್ಷ್ಮೀ ನನ್ನ ದೂರದ ಸಂಬಂಧಿ. ಚಾಸಾ-1 ಮೃತಳ ಮಗಳು. ಚಾಸಾ-3 ರಿಂದ ಚಾಸಾ-6 ಗೊತ್ತು ಮತ್ತು ನಮ್ಮ ಊರಿನವರು. ಚಾಸಾ-4 ಈಗ ಒಂದೂವರೆ ತಿಂಗಳ ಹಿಂದೆ ಮೃತಪಟ್ಟಿದ್ದಾರೆ. ಸುಮಾರು 19 ವರ್ಷಗಳ ಹಿಂದೆ ಭಾಗ್ಯಲಕ್ಷ್ಮೀ ಅವರ ಮದುವೆ ಆಗಿತ್ತು. ಚಾಸಾ-1 ಮತ್ತು 14 ಮೃತಳ ಮಕ್ಕಳು. ಭಾಗ್ಯಲಕ್ಷ್ಮೀ ಅವರ ಯಜಮಾನರು ತಮಿಳುನಾಡಿನಲ್ಲಿ ಕೆಲಸ ಮಾಡುತ್ತಿದ್ದರು. ಘಟನೆಗೆ 4-5 ವರ್ಷಗಳ ಮೊದಲಿನಿಂದ ಭಾಗ್ಯಲಕ್ಷ್ಮೀ ಅವರ ಮಕ್ಕಳು ಮೂಗೂರಿನ ಅವರ ತಂದೆಯ ಮನೆಯಲ್ಲಿ ವಾಸ ಇದ್ದರು. ಘಟನೆಗೆ 2-3 ವರ್ಷಗಳ ಮೊದಲಿನಿಂದ ಭಾಗ್ಯಲಕ್ಷ್ಮೀ ಮತ್ತು ಅವರ ಯಜಮಾನರ ಸಂಬಂಧ ಚೆನ್ನಾಗಿ ಇರಲಿಲ್ಲ. ಭಾಗ್ಯಲಕ್ಷ್ಮೀ ಮೈಸೂರಿನ ಗಾರ್ಮೆಂಟ್ಸ್ ನಲ್ಲಿ ಕೆಲಸ ಮಾಡುತ್ತಿದ್ದರು. ಕೋವಿಡ್ ಕಾರಣವಾಗಿ ಘಟನೆಗೆ 6 ತಿಂಗಳು ಮೊದಲಿನಿಂದ ಭಾಗ್ಯಲಕ್ಷ್ಮೀ ಕೆಲಸ ಬಿಟ್ಟಿದ್ದರು. ಚಾಸಾ-1 ಕಾಲೇಜಿಗೆ ಹೋಗುತ್ತಿದ್ದರು. ನನ್ನ ಮನೆಯಿಂದ

ಚಾಸಾ–1 ಅವರ ಮನೆಗೆ ಸುಮಾರು ಅರ್ಧ ಕಿ.ಮೀ ಅಂತರ ಇದೆ. ಚಾಸಾ–1, 8, 14 ಮತ್ತು ಮೃತಳು ಒಟ್ಟಿಗೆ ವಾಸ ಇದ್ದರು.

2. ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿ ಪರಿಚಯ ಇದೆ. ಮೂಗೂರು ವಾಸಿ. ದಿಃ 25.08.2021 ರಂದು ಸಂಜೆ 4.30 ರ ವೇಳೆಯಲ್ಲಿ ಮೃತ ಭಾಗ್ಯಲಕ್ಷ್ಮೀ 500/– ರೂಪಾಯಿ ಹಣ ಕೇಳಿ ನನಗೆ ಫೋನ್ ಮಾಡಿದ್ದರು. ಹಣ ಕೊಡಲು ಸ್ವಲ್ಪ ವೇಳೆ ಆಗುವುದಾಗಿ ನಾನು ಹೇಳಿದ ಕಾರಣ ಭಾಗ್ಯಲಕ್ಷ್ಮೀ ಅವರು ತಾನು ವಾಕಿಂಗ್ ಹೋಗುವುದಾಗಿ ಮತ್ತು ಹಣವನ್ನು ಚಾಸಾ–1 ಅವರ ಬಳಿ ಕೊಡುವಂತೆ ಹೇಳಿದ್ದರು. ಸಂಜೆ 6.00 ರ ನಂತರ ನಾನು ಚಾಸಾ–1 ಅವರ ಮನೆಗೆ ಹೋಗಿ 500/– ರೂಪಾಯಿ ಹಣವನ್ನು ಚಾಸಾ–1 ಅವರಿಗೆ ಕೊಟ್ಟು ನಾನು ವಾಪಸ್ಸು ಹೋಗುವಾಗ ಆರೋಪಿ ಸೈಕಲ್ ನಲ್ಲಿ ಹಿಂಭಾಗ ಎಲ್ ಕೋಟ್ ಸಿಕ್ಕಿಸಿಕೊಂಡು ಹೊಸಹಳ್ಳಿ ಮೂಳೆ ಚಾನೆಲ್ ಕಡೆ ಹೋಗುತ್ತಿದ್ದರು. ಆಗ ಆರೋಪಿ ರೋಸ್ ಬಣ್ಣದ ಬನಿಯನ್ ಮತ್ತು ಸಿಮೆಂಟ್ ಬಣ್ಣದ ಉದ್ದದ ನಿಕ್ಕರ್ ಹಾಕಿದ್ದರು.

3. ಸಂಜೆ 6.30 ರ ವೇಳೆ ನಾನು ಭಾಗ್ಯಲಕ್ಷ್ಮೀ ಅವರಿಗೆ ಫೋನ್ ಮಾಡಿದಾಗ ಫೋನ್ ಸ್ವಿಚ್ ಆಫ್ ಆಗಿತ್ತು. ಚಾಸಾ–1 ಅವರಿಗೆ ಫೋನ್ ಮಾಡಿದಾಗ ಮನೆಯ ಹೊರಗೆ ಶಬ್ದ ಆಗುವುದನ್ನು ಕೇಳಿ ಭಾಗ್ಯಲಕ್ಷ್ಮೀ ಬಂದಿದ್ದಾರೆ ಎಂದು ಹೇಳಿದರು. ರಾತ್ರಿ 8.00 ರ ವೇಳೆಗೆ ಚಾಸಾ–1 ಅವರು ಫೋನ್ ಮಾಡಿ ತನ್ನ ತಾಯಿ ಬಂದಿಲ್ಲ ಎಂದು ಹೇಳಿದರು. ಆಗ ನಾನು ಈ ಮೊದಲೇ ಹೇಳಿದ ಬಗ್ಗೆ ಕೇಳಲಾಗಿ ಚಾಸಾ–1 ಅವರು ಶಬ್ದ ಕೇಳಿ ತನ್ನ ತಾಯಿ ಬಂದಿರಬಹುದು ಎಂದು ಹೇಳಿರುವುದಾಗಿ ತಿಳಿಸಿದರು. ನಂತರ ನಾನು ಚಾಸಾ–1 ಅವರ ಮನೆಯ ಬಳಿ ಬಂದು ನಂತರ ನಾನು, ಚಾಸಾ–14 ಮತ್ತು ಚಾಸಾ–15 ಅವರ ಜೊತೆ ಹೊಸಹಳ್ಳಿ ಮೂಳೆ ಚಾನೆಲ್ ಕಡೆ ಭಾಗ್ಯಲಕ್ಷ್ಮೀ ಅವರನ್ನು ಹುಡುಕಿಕೊಂಡು ಬ್ಯಾಟರಿ ತೆಗೆದುಕೊಂಡು ಸ್ಕೂಟರ್ ನಲ್ಲಿ ಹೋಗಿದ್ದೆವು. ಭಾಗ್ಯಲಕ್ಷ್ಮೀ ಪ್ರತಿನಿತ್ಯ ಚಾನೆಲ್ ಕಡೆಗೆ ವಾಕಿಂಗ್ ಹೋಗುತ್ತಿದ್ದರು, ಅದೇ ಕಾರಣ ನಾವು ಚಾನೆಲ್ ಕಡೆಗೆ ಹುಡುಕಿಕೊಂಡು ಹೋಗಿದ್ದೆವು.

4. ಆರೋಪಿ ನಮಗೆ ಎದುರಿನಲ್ಲಿ ಗಾಭರಿಯಿಂದ ನಡೆದುಕೊಂಡು ಬರುತ್ತಿದ್ದು ಸೈಕಲ್ ಇರಲಿಲ್ಲ, ನಾವು ಬ್ಯಾಟರಿ ಬೆಳಕನ್ನು ಆರೋಪಿಯ ಕಡೆಗೆ ಮಾಡಿದಾಗ ಆತನು ಪಕ್ಕಕ್ಕೆ ಹೋಗಿ ಕುಳಿತುಕೊಂಡಿದ್ದನು. ನಾನು ನೋಡಿದಾಗ ಆರೋಪಿ ಹಾಕಿದ ಬಟ್ಟೆ ತೇವ ಆಗಿತ್ತು. ನಾಲೆಯ ಏರಿಯ ಮೇಲೆ ಹೊಸಹಳ್ಳಿ ತನಕ ನಾವು ಬ್ಯಾಟರಿ ಬೆಳಕಲ್ಲಿ ಭಾಗ್ಯಲಕ್ಷ್ಮೀ ಅವರನ್ನು ರಾತ್ರಿ 9.30 ತನಕ ಹುಡುಕಿಕೊಂಡು ಹೋಗಿದ್ದು ಸಿಗದೇ ಇದ್ದ ಕಾರಣ ವಾಪಸ್ಸು ಬಂದಿದ್ದೆವು. ದಿಃ 26.08.2021 ರಂದು ಮರುದಿನ ಎಲ್ಲರಿಗೂ ಫೋನ್ ಮೂಲಕ ಮಾಹಿತಿ ಕೊಟ್ಟು ಎಲ್ಲಾ ಕಡೆಗೆ ಹುಡುಕಲಾಯಿತು. ಮಧ್ಯಾಹ್ನ –3.00 ಗಂಟೆ ವೇಳೆಗೆ ಗದ್ದೆ ಕೆಲಸಕ್ಕೆ ಹೋದ ಮೂಗೂರಿನ ವಾಸಿಗಳು ಚಾನೆಲ್ ಪೈಪ್ ಪಕ್ಕದಲ್ಲಿ ಶವ ಇದ್ದ ಬಗ್ಗೆ ಮಾಹಿತಿ ನೀಡಿದರು. ವಿಷಯ ತಿಳಿದು ನಾನು, ಚಾಸಾ–14, ಮೃತಳ ತಂದೆ ಹಾಗೂ ಊರಿನ ಗ್ರಾಮಸ್ಥರು ಶವ ಇದ್ದ ಸ್ಥಳಕ್ಕೆ ಹೋಗಿ ನೋಡಿದ್ದೇವೆ. ಸ್ಥಳದಲ್ಲಿ ಇತರೆ ಸಾರ್ವಜನಿಕರು ಇದ್ದರು. ಶವ ಬಲಭಾಗ ಮತ್ತು ಮುಖ ಕೆಳಗೆ ಮಾಡಿ ಇತ್ತು. ಮುಖಕ್ಕೆ ಭತ್ತದ ಗೋಣಿ ಚೀಲದಿಂದ ಮುಚ್ಚಿದ್ದರು. ಶವದ ಮೈ ಮೇಲೆ ನೈಟಿ ಇತ್ತು. ಕಿವಿಯ ಹಿಂಬದಿ ಮತ್ತು ಕಣ್ಣಿನ ಬಳಿ ಗಾಯಗಳು ಇತ್ತು. ಕತ್ತಿನ ಬಳಿ ಕೊಯ್ದು ಗಾಯ ಇತ್ತು. ದೇಹದ ಮೇಲೆ ಇದ್ದ ನೈಟಿ ಮೇಲಕ್ಕೆ ಇದ್ದು ಅಸ್ತವ್ಯಸ್ತ ಇತ್ತು. ಶವ ನೋಡಲು ಹೋದ ವ್ಯಕ್ತಿಗಳು ಬೇರೆ ಬಟ್ಟೆಯನ್ನು ಶವದ ಮೇಲೆ ಮುಚ್ಚಿದ್ದರು. ಶವ ಇದ್ದ ಸ್ಥಳದಿಂದ 200 ಮೀಟರ್ ದೂರದಲ್ಲಿ ರೋಜಾ ಮೆಳೆಗಳ ಮೇಲೆ ರಕ್ತದ ಕಲೆ ಇತ್ತು, ಛತ್ರಿ ಮತ್ತು ಚಪ್ಪಲಿ ಬಿದ್ದಿತ್ತು. ಪೊಲೀಸರು ಸಾರ್ವಜನಿಕರ ಸಾಹಯದಿಂದ ಶವವನ್ನು ಮೇಲಕ್ಕೆ ಎತ್ತಿದ್ದರು. ರಾಜೇಶ್, ಶಿವಣ್ಣ ಮತ್ತು ಮಾದಯ್ಯ ಶವವನ್ನು ಆಟೋಗೆ ಎತ್ತಿ ಹಾಕಿದರು. ಶವವನ್ನು ಟಿ.ನರಸೀಪುರ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದರು.

5. ಆರೋಪಿ ಭಾಗ್ಯಲಕ್ಷ್ಮೀ ಅವರನ್ನು ಎಲ್ ಕೋಟ್‌ನಿಂದ ಹಲ್ಲೆ ಮಾಡಿ ಕೊಲೆ ಮಾಡಿದ ಬಗ್ಗೆ ತಿಳಿದು ಬಂತು. ಆರೋಪಿ ಹೋಗುವಾಗ, ಬರುವಾಗ ಚಾಸಾ–1 ಅವರಿಗೆ ತನ್ನ ಜೊತೆ ಮದುವೆ ಆಗುವುದಾಗಿ ರೇಗಿಸುತ್ತಿದ್ದರು. ಚಾಸಾ–1 ಅವರು ಕಾಲೇಜಿಗೆ ಹೋಗಿ ಬರುವಾಗ ಆರೋಪಿ ಚಾಸಾ–1 ಅವರನ್ನು ರೇಗಿಸುತ್ತಿದ್ದರು. ಈ ಬಗ್ಗೆ ಚಾಸಾ–1 ಅವರ ತಾಯಿ ಆರೋಪಿಯನ್ನು ಉದ್ದೇಶಿಸಿ ಆರೋಪಿ ಅವಿದ್ಯಾವಂತ ಮತ್ತು ತನ್ನ ಮಗಳು ವಿದ್ಯಾವಂತ ಇದ್ದು ಚಾಸಾ–1 ಅವರನ್ನು ಆರೋಪಿಗೆ ಕೊಡುವುದಿಲ್ಲ ಎಂದು ಆಕ್ಷೇಪ

ಮಾಡಿದ ಬಗ್ಗೆ ಭಾಗ್ಯಲಕ್ಷ್ಮೀ ನನಗೆ ತಿಳಿಸಿದರು. ನಾನು ಸಹ ಸದರಿ ವಿಷಯದ ಬಗ್ಗೆ ಆರೋಪಿಗೆ ಬುದ್ದಿವಾದ ಹೇಳಿದ್ದೆ. ಆರೋಪಿ ಚಾಸಾ–1 ಅವರ ತಾಯಿಗೆ ಗತಿ ಕಾಣಿಸುವುದಾಗಿ ಚಾಸಾ–1 ಅವರ ಬಳಿ ತಿಳಿಸಿದ್ದು ಚಾಸಾ–1 ಅವರು ತನ್ನ ತಾಯಿಗೆ ತಿಳಿಸಿದ್ದು, ಭಾಗ್ಯಲಕ್ಷ್ಮೀ ಅವರು ಸದರಿ ವಿಷಯವನ್ನು ನನಗೆ ತಿಳಿಸಿದ್ದರು. ಈ ಬಗ್ಗೆ ನಾನು ಹೇಳಿಕೆ ಕೊಟ್ಟಿದ್ದೇನೆ. ನನಗೆ ಈಗ ತೋರಿಸಿದ ವಸ್ತುಗಳನ್ನು ನಾನು ನೋಡಿದ್ದು, ಇವುಗಳನ್ನು ಈಗಾಗಲೇ ಎಂ.ಓ–1 ರಿಂದ 8 ಎಂದು ಗುರುತಿಸಲಾಗಿದೆ.

6. ಘಟನೆ ಬಗ್ಗೆ 9 ನೇ ತಿಂಗಳು 2021 ರಂದು ಟಿ.ನರಸೀಪುರ ನ್ಯಾಯಾಲಯದಲ್ಲಿ ಹೇಳಿಕೆ ಕೊಟ್ಟಿದ್ದೇನೆ. ಆರೋಪಿ ಚಾಸಾ–1 ಅವರ ತಾಯಿಗೆ ಗತಿ ಕಾಣಿಸುವುದಾಗಿ ಚಾಸಾ–1 ಅವರ ಬಳಿ ತಿಳಿಸಿದ್ದು ಚಾಸಾ–1 ಅವರು ತನ್ನ ತಾಯಿಗೆ ತಿಳಿಸಿದ್ದು, ಭಾಗ್ಯಲಕ್ಷ್ಮೀ ಅವರು ಸದರಿ ವಿಷಯವನ್ನು ನನಗೆ ತಿಳಿಸಿದ್ದರು ಎಂದು ಪುನಃ ನಾನು ಹೇಳಿಕೆ ಕೊಟ್ಟಿದ್ದೇನೆ. ಆರೋಪಿ ತಾನು ಎಲ್ ಕೋಟ್ ನಿಂದ ಹಲ್ಲೆ ಮಾಡಿ ಕೊಲೆ ಮಾಡಿ ಚಾನೆಲ್ ಪೈಪ್ ಬಳಿ ಹಾಕಿರುವುದಾಗಿ ತಿಳಿದು ಬಂದಿತ್ತು. ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಯನ್ನು ನೋಡಿ ಗುರುತಿಸಿದ್ದೇನೆ. (ಎರಡು ಸೀಲು ಮಾಡಿದ ಪ್ಯಾಕೇಟನ್ನು ಅನುಮತಿಯ ಮೇರೆಗೆ ತೆರೆಯಲಾಯಿತು.) ಘಟನೆ ದಿನ ಆರೋಪಿ ಧರಿಸಿದ್ದ ಟೀ ಶರ್ಟನ್ನು ನಾನು ಈಗ ನೋಡಿದ್ದು ಇದನ್ನು ಎಂ.ಓ–9 ಮತ್ತು ಉದ್ದ ಚಡ್ಡಿಯನ್ನು ಎಂ.ಓ–10 ಎಂದು ಗುರುತಿಸಲಾಯಿತು.

**<u>ಪಾಟೀಸವಾಲು :– ಆರೋಪಿ ಪರ ಶ್ರೀ ಆರ್.ಇ ವಕೀಲರಿಂದಃ–</u>**

7. ನಾನು ವ್ಯವಸಾಯ ಮಾಡುತ್ತೇನೆ. ಕೂಲಿ ಕೆಲಸ ಮಾಡುವ ಬಗ್ಗೆ ನನಗೆ ಪೊಲೀಸರು ಕೇಳಿಲ್ಲ ಮತ್ತು ನಾನು ಹೇಳಿಲ್ಲ. ನಾನು ಕೂಲಿ ಕೆಲಸ ಮಾಡುವ ಬಗ್ಗೆ ಪೊಲೀಸರಿಗೆ ಹೇಳಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಹೇಳಿಕೆ ಕೊಡುವಾಗ ಭಾಗ್ಯಲಕ್ಷ್ಮೀ ನನ್ನ ಮಾವನ ಮಗಳು ಎಂದು ಹೇಳಿಕೆ ಕೊಟ್ಟಿದ್ದೇನೆ. ಈಗ ಸಾಕ್ಷಿ ಹೇಳುವಾಗ ನನ್ನ ದೂರದ ಸಂಬಂಧಿ ಎಂದು ಹೇಳಿದ್ದೇನೆ. ಜಮೀನು ಸರ್ವೇ ನಂಬರ್ 500/1 ನನ್ನ ತಂದೆ ಹೆಸರಿನಲ್ಲಿ ಇದೆ. ನನ್ನ ಹೆಸರಿನಲ್ಲಿ ಜಮೀನು ಇಲ್ಲ. ನಾನು ಜಮೀನು ಕೆಲಸ

ಮಾಡುತ್ತೇನೆ. ನಾನು ಕೂಲಿ ಕೊಟ್ಟು ವ್ಯವಸಾಯ ಕೆಲಸ ಮಾಡಿಸುತ್ತಿದ್ದೆ ಎಂದರೆ ಸರಿ. ಚಾಸಾ–3, 4 ಮತ್ತು 6 ನನ್ನ ಬಳಿ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ನನ್ನ ವಿರುದ್ಧ ಅಬಕಾರಿ ಇಲಾಖೆಯವರು ಪ್ರಕರಣ ದಾಖಲು ಮಾಡಿದ್ದಾರೆ. ಸದರಿ ಪ್ರಕರಣದ ಸಲುವಾಗಿ ನಾನು ನ್ಯಾಯಾಂಗ ಬಂಧನದಲ್ಲಿ ಇದ್ದೆ ಎಂದರೆ ಸರಿ. ಭಾಗ್ಯಲಕ್ಷ್ಮೀ ಅವರ ಯಜಮಾನರು ಟಿ.ನರಸೀಪುರ ನ್ಯಾಯಾಲಯದಲ್ಲಿ ಪ್ರಕರಣ ಸಲ್ಲಿಸಿದ ಬಗ್ಗೆ ಮಾಹಿತಿ ಇಲ್ಲ. ಭಾಗ್ಯಲಕ್ಷ್ಮೀ ಅವರ ಯಜಮಾನರು ಟಿ.ನರಸೀಪುರ ನ್ಯಾಯಾಲಯದಲ್ಲಿ ಭಾಗ್ಯಲಕ್ಷ್ಮೀ ಅವರ ವಿರುದ್ಧ ವಿವಾಹ ವಿಚ್ಛೇದನ ಸಲ್ಲಿಸಿದ ಬಗ್ಗೆ ಮಾಹಿತಿ ಇಲ್ಲ. ನನಗೆ ಪತ್ನಿ ಮತ್ತು ಇಬ್ಬರು ಮಕ್ಕಳು ಇದ್ದಾರೆ.

8. ನಾನು ಬಡ್ಡಿ ಮತ್ತು ಚೀಟಿ ವ್ಯವಹಾರ ಮಾಡುತ್ತೇನೆ. ಭಾಗ್ಯಲಕ್ಷ್ಮೀ ಅವರು ಚೀಟಿ ವ್ಯವಹಾರ ಸಂಬಂಧ ನನ್ನಿಂದ ರೂ. 500/– ಹಣವನ್ನು ತೆಗೆದುಕೊಂಡಿದ್ದರು. ಹಣವನ್ನು ಪಡೆದ ವ್ಯಕ್ತಿಗಳ ಹೆಸರುಗಳನ್ನು ಪುಸ್ತಕದಲ್ಲಿ ಬರೆದು ಇಟ್ಟಿದ್ದೇನೆ. ಈ ಬಗ್ಗೆ ದಾಖಲೆ ಹಾಜರು ಮಾಡಿಲ್ಲ. ನಾನು ಚೀಟಿ ವ್ಯವಹಾರ ಮತ್ತು ಬಡ್ಡಿ ವ್ಯವಹಾರ ಮಾಡಲು ಲೈಸೆನ್ಸ್ ಪಡೆದಿಲ್ಲ. ನನ್ನ ಮತ್ತು ಭಾಗ್ಯಲಕ್ಷ್ಮೀ ಅವರ ನಡುವೆ ಅನೈತಿಕ ಸಂಬಂಧ ಇತ್ತು ಎಂದರೆ ಸರಿಯಲ್ಲ. ಈ ಸಂಬಂಧ ಊರಿನಲ್ಲಿ ಪಂಚಾಯ್ತಿ ಆಗಿತ್ತು ಎಂದರೆ ಸರಿಯಲ್ಲ. ಅದೇ ಕಾರಣ ನನ್ನ ಮತ್ತು ನನ್ನ ಪತ್ನಿ ನಡುವೆ ವಿಶ್ವಾಸ ಇಲ್ಲ ಎಂದರೆ ಸರಿಯಲ್ಲ. ಅದೇ ಕಾರಣ ನಾನು ಭಾಗ್ಯಲಕ್ಷ್ಮೀ ಅವರ ಮನೆಗೆ ಹೋಗುತ್ತಿದ್ದು, ಅವರ ಮನೆಯ ವ್ಯವಸ್ಥೆಗಳನ್ನು ನಾನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಆರೋಪಿ ಮನೆ ಮತ್ತು ಭಾಗ್ಯಲಕ್ಷ್ಮೀ ಮನೆ ಅಕ್ಕ–ಪಕ್ಕ ಇವೆ ಎಂದರೆ ಸರಿ. ಭಾಗ್ಯಲಕ್ಷ್ಮೀ ಅವರ ಕೊನೆಯ ಮೊಬೈಲ್ ಸಂಖ್ಯೆ 35. ನನ್ನ ಮೊಬೈಲ್ ನಿಂದ ಭಾಗ್ಯಲಕ್ಷ್ಮೀ ಮೊಬೈಲ್ ಗೆ ಫೋನ್ ಮಾಡಿದ ಬಗ್ಗೆ ದಾಖಲೆ ಕೊಟ್ಟಿಲ್ಲ. ತನಿಖಾಧಿಕಾರಿ ಕಾಲ್ ವಿವರಗಳನ್ನು ನನ್ನಿಂದ ಪಡೆದಿಲ್ಲ.

9. ಆರೋಪಿ ವಿದ್ಯಾಭ್ಯಾಸದ ಬಗ್ಗೆ ಮಾಹಿತಿ ಇಲ್ಲ. ಆರೋಪಿ ಮೂಗೂರಿನ ಶಾಲೆಯಲ್ಲಿ 10 ನೇ ತರಗತಿ ವಿದ್ಯಾಭ್ಯಾಸ ಮಾಡಿದ್ದಾರೆ ಎಂದು ಗೊತ್ತಿಲ್ಲ. ಆರೋಪಿ ಮತ್ತು ಚಾಸಾ–1 ಪ್ರೀತಿಸುತ್ತಿದ್ದ ವಿಚಾರ ಊರಿಗೆ ಗೊತ್ತಿತ್ತು ಎಂದರೆ ಸರಿಯಲ್ಲ, ಆದರೆ ಆರೋಪಿ ಚಾಸಾ–1 ಅವರಿಗೆ ಹಿಂಸೆ ಕೊಡುತ್ತಿದ್ದರು. ಆರೋಪಿ ಮತ್ತು ಚಾಸಾ–1 ಅವರ ಪ್ರೀತಿ–ಪ್ರೇಮ

ಸಂಬಂಧ ಊರಿನಲ್ಲಿ ಸಾಕಷ್ಟು ಪಂಚಾಯ್ತಿ ಆಗಿತ್ತು ಮತ್ತು ನಾನು ಸಹ ಪಂಚಾಯ್ತಿಯಲ್ಲಿ ಇದ್ದೆ ಎಂದರೆ ಸರಿಯಲ್ಲ. ಚಾಸಾ–1 ಅವರನ್ನು ಆರೋಪಿಗೆ ಕೊಟ್ಟು ಮದುವೆ ಮಾಡುವ ಬಗ್ಗೆ ಪಂಚಾಯ್ತಿಯಲ್ಲಿ ತೀರ್ಮಾನ ಆಗಿತ್ತು ಎಂದರೆ ಸರಿಯಲ್ಲ. ನನ್ನ ಮತ್ತು ಭಾಗ್ಯಲಕ್ಷ್ಮೀ ಅನೈತಿಕ ಸಂಬಂಧ ಕಾರಣ ಊರಿನ ಗ್ರಾಮಸ್ಥರು ನನಗೆ ಬುದ್ದಿವಾದ ಹೇಳಿದ ಕಾರಣ ಆರೋಪಿಯ ಮೇಲೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ವೈಮನಸ್ಸು ಇದ್ದ ಕಾರಣ ಆರೋಪಿ ವಿರುದ್ದ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಘಟನೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ–3 ರಿಂದ ನಿಪಿ–11 ಫೋಟೋಗಳಲ್ಲಿ ನಾನು ಕಂಡು ಬರುವುದಿಲ್ಲ ಎಂದರೆ ಸರಿ.

ಕೋರಿಕೆಯ ಮೇರೆಗೆ ಪಾಟೀಸವಾಲನ್ನು ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಯಥಾವತ್ತಾಗಿ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು